**ದಿನಾಂಕಃ ೧೪-೦೯-೨೦೧೭ ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಶ್ರೀ ಎಸ್ ಸಿ ಜಿ ವಕೀಲರಿಂದಃ

(ಪ್ರತಿವಾದಿ ನಂ.೧೦, ೧೫ ರಿಂದ ೧೭ ರವರ ಪರವಾಗಿ)

ಅಂಕದವರ ಕುಟುಂಬದ ಗೋಕಾಕದಲ್ಲಿ ಪ್ರತಿಸ್ಥಿತ ಮತ್ತು ಶ್ರೀಮಂತರು ಎಂದರೆ ಸರಿ. ನನ್ನ ತಮ್ಮ ಬಸವರಾಜ ತೀರಿಕೊಂಡು ೧೧ ವರ್ಷ ಮೇಲಾಗಿರುತ್ತದೆ. ಪ್ರತಿವಾದಿ ನಂ. ೧೫ ನನ್ನ ತಮ್ಮ ಬಸವರಾಜನ ಹೆಂಡತಿ ಎಂದರೆ ಸರಿ. ೧೬ ಮತ್ತು ೧೭ ನೇ ಪ್ರತಿವಾದಿಗಳು ಆತನ ಮಕ್ಕಳು ಎಂದರೆ ಸರಿ. ೧೬ ನೇ ಪ್ರತಿವಾದಿ ಎಮ್ ಬಿ ಬಿ ಎಸ್ ಕಲಿಯುತ್ತಿದ್ದಾಳೆ ಎಂದರೆ ಸರಿ. ಆಕೆ ನಮ್ಮ ಸಹಾಯ ವಿಲ್ಲದೆ ಸ್ಕಾಕಲರ್ ಶಿಪ್ ಮೇಲೆ ಎಮ್ ಬಿ ಬಿ ಎಸ್ ಕಲಿತಿದ್ದಾಳೆ ಎಂದರೆ ಸರಿ. ೧೭ ನೆ ಪ್ರತಿವಾದಿ ಸ್ವಲ್ಪ ಬುದ್ದಿ ಮಾಂಧ್ಯ ಇದ್ದಾನೆ ಎಂದರೆ ಸರಿ. ೧೫ ನೇ ಪ್ರತಿವಾದಿಗೆ ಕಿವಿಗಳು ಸರಿಯಾಗಿ ಕೇಳುವುದಿಲ್ಲ ಎಂದರೆ ಸರಿ. ೧೫ ರಿಂದ೧೭ ಪ್ರತಿವಾದಿಗು ಹೆಸರಿನಿಂದ ೧ ಗೇಣು ಸಹ ಆಸ್ತಿ ಇಲ್ಲ. ೧೫ ನೇ ಪ್ರತಿವಾದಿಯ ಗಂಡ ತೀರಿಕೊಂಡ ನಂತರ ನಾನು ೭ ನೇ ಪ್ರತಿವಾದಿ ಹಾಗೂ ೧೦ ನೇ ಪ್ರತಿವಾದಿ ಮೊದಲು ೧೫ ನೇ ಪ್ರತಿವಾದಿಗೆ ಪ್ರತಿ ತಿಂಗಳ ೧೫ ನೂರು ರೂಪಾಯಿಯಂತೆ ಕೆಳದ ೨-೩ ವರ್ಷಗಳ ೨೦೦೦ ರೂ ಪ್ರತಿ ತಿಂಗಳ ನೀಡುತ್ತಿದ್ದೇವೆ. ಗೋಕಾಕದ ಮಾರುಕಟ್ಟೆಯ ಮುಖ್ಯ ರಸ್ತೆಯಲ್ಲಿ ನನ್ನ ಟೆಕ್ಸಟೈಲ್ಸ ಅಂಗಡಿ ಇದೆ. ಸದರಿ ಅಂಗಡಿಯಲ್ಲಿ ೧೨ ಜನ ಕೆಲಸಗಾರರು ಇರುತ್ತಾರೆ. ಅವರಿಗೆ ೧೫ ರಿಂದ ೨೦೦೦ ರೂ. ಪಗಾರ ನಾನು ನೀಡುತ್ತೇನೆ. ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳಾಗಿದ್ದು ಇನ್ನುವರೆಗೂ ಪಾಲು ಆಗಿಲ್ಲ ಎಂದರೆ ಸರಿ. ೧೫ ರಿಂದ ೧೭ ಪ್ರತಿವಾದಿಗಳಿಗೆ ಯಾವುದೇ ಉತ್ಪನ್ನ ಮತ್ತು ಆದಾಯದ ಮೂಲ ಇಲ್ಲ ಎಂದರೆ ಸರಿ. ನಾನು ಪ್ರತಿವಾದಿ ನಂ೨ ಮತ್ತು ೩ ಪ್ರತಿವಾದಿ ನಂ೭ ಮತ್ತು ೪, ೧೧, ವರ್ಷಕ್ಕೆ ೧ ಕೋಟಿ ರೂಪಾಯಿ ಆಧಾಯ ಇದೆ ಎಂದರೆ ಸಾಕ್ಷಿ ನನ್ನದ್ದು ಸಣ್ಣ ಅಂಗಡಿ ಇದ್ದು ಟರ್ನವರ ೧ ಕೋಟಿಯಾಗುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿ ಸ್ವತಃ ಹೇಳುತ್ತಾರೆ ಪ್ರತಿವಾದಿ ನಂ. ೧೯ ನದ್ದು ೩ ಕೋಟಿ ರೂಪಾಯಿಗಿಂತ ಹೆಚ್ಚು ಆದಾಯ ಇದೆ. ೧೧ ನೇ ಪ್ರತಿವಾದಿಗೆ ೫ ಕೋಟಿಯಷ್ಟು ಆದಾಯ ಇದೆ. ೧೫ ರಿಂದ೧೭ ಪ್ರತಿವಾಗಳಿಗೆ ತುಂಬಾ ಕಷ್ಟ ಇದ್ದು ಅವರು ಬೇರೆಯವರ ಹತ್ತಿರ ಹಣ ಪಡೆದುಕೊಂಡು ಜೀವನ ನಡೆಸುತ್ತಾರೆ ಎಂದರೆ ಸರಿ.

ಓ ಎಸ್ ನಂ ಃ ೨೯೦/೨೦೧೨

ಪಿಡಬ್ಲ್ಯೂ ಃ ೧ ಹಾಜರು

ಸರ್ವೆ ನಂ. ೧೮೨/೭ ಮಾತ್ರ ನನ್ನ ಹೆಸರಿನಲ್ಲಿ ಇರುತ್ತದೆ . ಸದರಿ ಆಸ್ತಿಯಲ್ಲಿ ಈ ದಾವೆ ಚಾಲ್ತಿಯಲ್ಲಿ ಇರುವಾಗ ನಾವು ವ್ಯವಹಾರಗಳನ್ನು ಬಗೆಹರಿಸಿಕೊಳ್ಳಲು ಅಣ್ಣ ತಮ್ಮಂದಿರ ಎಲ್ಲರು ಸೇರಿ ಮಾರಾಟ ಮಾಡಿ ಅದರಿಂದ ಬಂದ ಲಾಭವನ್ನು ಎಲ್ಲರೂ ಹಂಚಿಕೊಂಡಿರುತ್ತೇವೆ. ಈಗ ನನಗೆ ತೋರಿಸುತ್ತಿರುವ ದಾಖಲಾತಿ ಸದರಿ ಆಸ್ತಿಗೆ ಸಂಬಂಪಟ್ಟ ಖರೀದಿ ಪತ್ರ ಆಗಿರುತ್ತದೆ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-೨ ಎಂದು ಗುರುತಿಸಲಾಯಿತು. ೨ ನೇ ಪ್ರತಿವಾದಿಗೆ ಸರ್ವೆ ನಂ.೧೮೨/೭ ನ್ನು ಮಾರಾಟ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ. ೧೫ ರಿಂದ ೧೭ ಇವರಿಗೆ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾವು ಆಸ್ತಿಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಐಟಮೆ ನಂ. ೧೦ ಕ್ಕೆ ಸಂಬಂಧಪಟ್ಟಂತೆ ನಾವು ಅಣ್ಣ ತಮ್ಮಂದಿರು ೧೭-೦೩-೨೦೦೫ ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ೧೦ ನೇ ಪ್ರತಿವಾದಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ಸದರಿ ಜಾಗೆಯಲ್ಲಿ ಬ್ಯಾಂಕಿನಿಂದ ಸಾಲವನ್ನು ತೆಗೆಸಲು ಅನುಕೂಲವಾಗುವಂತೆ ಸದರಿ ದಾಖಲಾತಿ ಮಾಡಲಾಗಿದೆ ಆದರೆ ಪಾಲು ಆಗಿಲ್ಲ ಎಂದು ನುಡಿಯುತ್ತಾರೆ. ೧೦ ನೇ ಪ್ರತಿವಾದಿ ರಿದ್ದಿ ಸಿದ್ದಿ ಫ್ಯಾಕ್ಟರಿಯಿಂದ ಕಚ್ಚಾ ವಸ್ತುಗಳನ್ನು ಖರೀದಿಸಿ ಪಶು ಆಹಾರಗಳನ್ನು ಪೂರೈಸುತ್ತಿದ್ದ ಮತ್ತು ಆಧಾಯ ಗಳಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ೧೦ ನೇ ಪ್ರತಿವಾದಿ ಬನಶಂಕರಿ ಕಲ್ಯಾಣ ಮಂಟಪದಲ್ಲಿ ಹಿಂದಿನ ಭಾಗವನ್ನು ಬಾಡಿಗೆಗೆ ತೆಗೆದುಕೊಂಡಿದ್ದ. ಅದರಲ್ಲಿ ಆತ ನ್ಯೂ ದಿಲ್ಲಿ ಅಪರೆಲ್ಸ ಅಂಗಡಿ ನಡೆಸುತ್ತಿದ್ದಾನೆ ಎಂದರೆ ಸರಿ. ೧೦ ನೇ ಪ್ರತಿವಾದಿ ತನ್ನ ಸ್ವಂತ ಗಳಿಕೆಯಿಂದ ಐಟೆಮ ನಂ.೧೩ ರಲ್ಲಿ ಸ್ವಂತ ಮನೆ ಕಟ್ಟಿಸಿದ್ದಾನೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಆ ತ ಸದರಿ ಪ್ಲಾಟ್ ನಲ್ಲಿ ಸಾಲ ಮಾಡಿ ಮನೆ ಕಟ್ಟಿಸಿದ್ದ ಎಂದರೆ ಇರಬಹುದು. ಸದರಿ ಮನೆಯಲ್ಲಿ ೧೦ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿ.

ಮೊದಲನೆ ಪ್ರತಿವಾದಿ ವಕೀಲರ ಕೋರಿಕ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ

(ಸತೀಶ ಜೆ. ಬಾಳಿ)

೧ನೇ ಹೆಚ್ಚುವರಿ ಹಿರಿಯ ದಿವಾಣಿ

ಸಾಕ್ಷಿಯ ಸಹಿ ನ್ಯಾಯಾಧೀಶರು, ಗೋಕಾಕ.